2009–10ನೇ ಸಾಲಿನಲ್ಲಿ ಹಜ್ ಕ್ಯಾಂಪ್‌ಗಳಿಗೆ ಬಿಡುಗಡೆ ಮಾಡಿದ ಹಣ

875 (1477) ಶ್ರೀ ಖಾದರ್ ಯು.ಟಿ. ಎಂಎಲ್‌ಎ : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ (ಯಾತ್ರಾರ್ಥಿಗಳ) ಹಜ್ ಕ್ಯಾಂಪುಗಳಿಗೆ ಬಿಡುಗಡೆ ಮಾಡಿದ ಹಣ ಎಷ್ಟು;

ಆ) ಆ ಪೈಕಿ ಬೆಂಗಳೂರು ಹಜ್ ಕ್ಯಾಂಪಿಗೆ ಎಷ್ಟು ಹಣ ಬಿಡುಗಡೆ ಗೊಳಿಸಲಾಗಿತ್ತು;

ಇ) ಮಂಗಳೂರು ಹಜ್ ಕ್ಯಾಂಪಿಗೆ ಬಿಡುಗಡೆ ಮಾಡಿದ ಹಣವೆಷ್ಟು;

ಈ) ಹಾಗಿದ್ದಲ್ಲಿ, ಬಿಡುಗಡೆಯಾದ ಹಣ ಸಂಪೂರ್ಣ ಉಪಯೋಗ ವಾಗಿದೆಯೇ; (ವಿವರ ನೀಡುವುದು)?

ಪ್ರೊ. ಡಾ॥ ಮಮ್ತಾಜ್ ಆಲಿಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) 2009–10ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ರಾಜ್ಯ ಹಜ್ ಸಮಿತಿಯ ನಿರ್ವಹಣೆ ಹಾಗೂ ಬೆಂಗಳೂರು ಮತ್ತು ಮಂಗಳೂರಿನಲ್ಲಿ ಹಜ್ ಕ್ಯಾಂಪ್ ಆಯೋಜಿಸಲು ರೂ. 80.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ.

ಆ) ಬಿಡುಗಡೆಯಾದ ರೂ.80.00 ಲಕ್ಷಗಳ ಅನುದಾನದಿಂದಲೇ ಬೆಂಗಳೂರಿನಲ್ಲಿ ಹಜ್ ಕ್ಯಾಂಪ್ ವೆಚ್ಚವನ್ನು ಭರಿಸಲಾಗಿದೆ.

ಇ) ಬಿಡುಗಡೆಯಾದ ರೂ.80.00 ಲಕ್ಷಗಳ ಅನುದಾನದಿಂದಲೇ ಮಂಗಳೂರಿನಲ್ಲಿ ಹಜ್ ಕ್ಯಾಂಪ್ ವೆಚ್ಚವನ್ನು ಭರಿಸಲಾಗಿದೆ.

ಈ) ಹೌದು. ಯಾವ ಕಾರ್ಯಕ್ಕೆ ಹಣ ಬಿಡುಗಡೆ ಮಾಡಲಾ ಗಿದೆಯೋ, ಆ ಕಾರ್ಯಕ್ಕೆ ಹಣವು ಸಂಪೂರ್ಣವಾಗಿ ಉಪಯೋಗಿಸಲಾಗಿದೆ. ವಿವರ ಈ ಕೆಳಕಂಡಂತಿದೆ:

1) ಹಜ್ ಕ್ಯಾಂಪುಗಳ ನಿರ್ವಹಣೆಗೆ	ರೂ.30.00 ಲಕ್ಷಗಳು
2) ಹೆಜ್ ಕಮಿಟಿ ನಿರ್ವಹಣೆಗೆ	ರೂ.50.00 ಲಕ್ಷಗಳು
	ರೂ.80.00 ಲಕ್ಷಗಳು